/368111/2023

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯಡಿ ರಚಿಸಲಾಗಿರುವ ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾಧ್ಯತಾ ಗುಂಪುಗಳ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ - 321ರಲ್ಲಿನ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022 (ಭಾಗ-2), ದಿನಾಂಕ: 27.07.2022.
3. ತಿದ್ದುಪಡಿ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022 (ಭಾಗ-2), ದಿನಾಂಕ: 30.09.2022.
4. ಮಾರ್ಪಾಡು ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022 (ಭಾಗ-6), ದಿನಾಂಕ: 21.10.2022.
5. ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022, ದಿನಾಂಕ: 02.12.2022.
6. ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022 (ಭಾಗ-3), ದಿನಾಂಕ: 12.12.2022.

*******

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-321 ರಲ್ಲಿ '**ಸ್ವಾಮಿ ವಿವೇಕಾನಂದ ಯುವಕರ ಸ್ವಸಹಾಯ ಗುಂಪು' ರಚಿಸಿ ಸ್ವ-ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಯುವಕರನ್ನು ಪ್ರೋತ್ಸಾಹಿಸಲಾಗುವುದು**' ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಪ್ರತಿ ಗ್ರಾಮಕ್ಕೆ ಒಂದು ಸ್ವಾಮಿ ವಿವೇಕಾನಂದ ಯುವಕ ಸ್ವ-ಸಹಾಯ ಗುಂಪುಗಳನ್ನು ರಚಿಸಲು ಯೋಜನೆಯ ಅನುಷ್ಠಾನಕ್ಕಾಗಿ ಮೊದಲ ಹಂತವಾಗಿ ರೂ.10.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಿ ಅದರೊಂದಿಗೆ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರಲ್ಲಿ 'ಸ್ವಾಮಿ ವಿವೇಕಾನಂದ ಯುವಕರ ಸ್ವಸಹಾಯ ಗುಂಪು'ಗಳನ್ನು "**ಸ್ವಾಮಿ ವಿವೇಕಾನಂದ ಯುವಕರ ಸಂಘ**" ಎಂದು ಪದನಾಮೀಕರಣಗೊಳಿಸಿ ಆದೇಶಿಸಲಾಗಿದೆ. ಆದರೆ, 'ಸ್ವಾಮಿ ವಿವೇಕಾನಂದ ಯುವಕರ ಸಂಘ' ಎಂದು ಪದನಾಮೀಕರಣಗೊಳಿಸಿದಲ್ಲಿ ಉಂಟಾಗಬಹುದಾದ ಸಮಸ್ಯೆಗಳ ಕುರಿತು ಮನಗಂಡು "**ಸ್ವಾಮಿ ವಿವೇಕಾನಂದ ಯುವಕರ ಸಂಘ**" ಎಂಬುದರ ಬದಲಾಗಿ '**ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾಧ್ಯತಾ ಗುಂಪು**'ಗಳೆಂದು ಮರುಪದನಾಮೀಕರಿಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಯೋಜನೆಯ ಹಾಲಿ ಇರುವ ಮಾರ್ಗಸೂಚಿಯನ್ನು ತಿದ್ದುಪಡಿ ಮಾಡಿ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲು ತೀರ್ಮಾನಿಸಲಾಗಿದೆ. ಅದರಂತೆ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇಪಿಇ/268/2022, ಬೆಂಗಳೂರು, ದಿನಾಂಕ:10.01.2023.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, **ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯಡಿ** ರಚಿಸಲಾಗಿರುವ "**ಸ್ವಾಮಿ ವಿವೇಕಾನಂದ ಯುವಕರ ಸಂಘ**" ಎಂಬುದರ ಬದಲಾಗಿ '**ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾಧ್ಯತಾ ಗುಂಪು**'ಗಳೆಂದು ಮರುಪದನಾಮೀಕರಿಸಿ, ಹಾಲಿ ಇರುವ

ಮಾರ್ಗಸೂಚಿಗೆ ಬದಲಾಗಿ ಅನುಬಂಧದಲ್ಲಿ ಲಗತ್ತಿಸಿರುವ ಪರಿಷ್ಕೃತ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳತಕ್ಕದ್ದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Signed by Chethana M
Date: 10-01-2023 14:48:30

(ಚೇತನ ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) / (ಜಿ&ಎಸ್.ಎಸ್.ಎ) / (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆ.ಆ ಕೋಶ), ಬಹುಮಹಡಿ ಕಟ್ಟಡ.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು / ಎಲ್ಲಾ ಜಿಲ್ಲೆಗಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು :- **ಆಯುಕ್ತರ ಮೂಲಕ.**
5. ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ.
6. ಡಾ|| ರಾಗಪ್ರಿಯ, ಮಿಷನ್ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಮಿಷನ್, ಜೆ.ಸಿ. ರಸ್ತೆ, ಬೆಂಗಳೂರು.
7. ಶ್ರೀ ಮುರಳೀ ಕೃಷ್ಣ, ಸಂಯೋಜಕರು, ಎಸ್.ಎಲ್.ಬಿ.ಸಿ ಮತ್ತು ಪ್ರಧಾನ ವ್ಯವಸ್ಥಾಪಕರು, ಕೆನರಾ ಬ್ಯಾಂಕ್.
8. ಶ್ರೀ ರಾಧಾಕೃಷ್ಣನ್, ಎ.ಜಿ.ಎಂ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ.
9. ಶ್ರೀ ಮೃತ್ಯುಂಜಯ ಕುಮಾರ್, ಜಿ.ಎಂ., ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ.
10. ನಿರ್ದೇಶಕರು, ಎಕನಾಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಇಲಾಖೆ, ಅಂಬೇಡ್ಕರ್ ವೀದಿ, ಬೆಂಗಳೂರು - 560 001.
11. ಶ್ರೀ ಅಮೋಘ್, ಮುಖ್ಯ ವ್ಯವಸ್ಥಾಪಕರು, SELCO FOUNDATION.
12. ರಾಜ್ಯ ನಿರ್ದೇಶಕರು, ನೆಹರು ಯುವ ಕೇಂದ್ರ, ಗುರುನಾನಕ್ ಭವನ, ವಸಂತನಗರ, ಬೆಂಗಳೂರು - 52.
13. ಶ್ರೀಮತಿ ಅನಿತಾ, ವಿಷನ್ ಕರ್ನಾಟಕ ಫೌಂಡೇಷನ್.
14. ಶ್ರೀ ಅಭಿಷೇಕ್ ಕುಮಾರ್, ಉಪ ವ್ಯವಸ್ಥಾಪಕರು, LG ELECTRONICS INDIA PRIVATE LIMITED, 9ನೇಮಹಡಿ, ಡಿ. ಟವರ್, ಐವಿಸಿ ನಾಲೇಜ್ಡ್ ಪಾರ್ಕ್, 4/1, ಬನ್ನೇರುಘಟ್ಟ ಮುಖ್ಯರಸ್ತೆ, ಭವಾನಿ ನಗರ, ಸುದ್ದಗುಂಟೆ ಪಾಳ್ಯ, ಬೆಂಗಳೂರು-560029.
15. ಶ್ರೀಮತಿ ಅರುಣ ಸಂಪಿಗೆ, ಸದಸ್ಯರು, Indian Administrative Fellow - NUDGE.
16. ಶ್ರೀ ಮುಕುಂದರಾಜ್, ಯೋಜನಾ ಮುಖ್ಯಸ್ಥರು, ಎಸ್.ಡಿ.ಜಿ.ಸಿ.ಸಿ, ಬಹುಮಹಡಿ ಕಟ್ಟಡ.
17. ಡಾ: ಪ್ರದೀಪ್ ಬಿ.ಎಸ್, ಪ್ರೊಫೆಸರ್, ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ / ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ / ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
19. ಉಪ ನಿರ್ದೇಶಕರು, ಟಿಎನ್‌ಎಂಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
20. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
21. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆ (ಎಸ್‌ವೈಎಸ್‌ವೈ)

ಈ ಯೋಜನೆಯನ್ನು **"ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆ" (ಎಸ್‌ವೈಎಸ್‌ವೈ)** ಎಂದು ಹೆಸರಿಸಲಾಗಿದೆ ಮತ್ತು ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಲಾದ 'ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾದ್ಯತಾ ಗುಂಪು'ಗಳಿಗೆ **'ಕಿರು ಘಟಕ**'ಗಳನ್ನು ಮತ್ತು **'ಆದಾಯ ಸೃಜಿಸುವ ಗುಂಪು ಚಟುವಟಿಕೆ**'ಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪ್ರತಿ ಗ್ರಾಮ ಪಂಚಾಯತಿಗೆ ಗ್ರಾಮೀಣ ಯುವಕರನ್ನೊಳಗೊಂಡ ಒಂದು ಅಥವಾ ಎರಡು "ಜಂಟಿ ಭಾದ್ಯತಾ ಗುಂಪು (JLG)"ಗಳನ್ನು ಸ್ಥಾಪಿಸುವುದು ಹಾಗೂ ಸದರಿ ಗುಂಪುಗಳನ್ನು "ಸ್ವಾಮಿ ವಿವೇಕಾನಂದ ಯುವ ಜಂಟಿ ಹೊಣೆಗಾರಿಕೆ ಗುಂಪು **(SYJLG)" ಗಳೆಂದು ಕರೆಯುವುದು.** ಪ್ರತಿ SYJLG ಗಳು 4 ರಿಂದ 10 ಗ್ರಾಮೀಣ ಯುವಕರನ್ನು ಒಳಗೊಂಡಿರಬೇಕು

**ಎಸ್‌ವೈಎಸ್** ಯೋಜನೆಯು 'ರಾಜ್ಯ ಪುರಸ್ಕೃತ ಯೋಜನೆ'ಯಾಗಿದ್ದು, ಸದರಿ ಯೋಜನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮತ್ತು ಬ್ಯಾಂಕ್ (ರಾಷ್ಟ್ರೀಕೃತ, ಖಾಸಗಿ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು) ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು "**ನೋಡಲ್ ಇಲಾಖೆ**ಯಾಗಿದೆ".

| ಕ್ರ. ಸಂ. | ಮಾನದಂಡ | ಯೋಜನೆಯ ವಿಶಿಷ್ಟತೆಗಳು |
|---|---|---|
| 1. | **ಉದ್ದೇಶ** | • ಹೊಸ ಸ್ವಯಂ ಉದ್ಯೋಗ ಯೋಜನೆಗಳು / ಕಿರು ಉದ್ಯಮಗಳು ಮುಂತಾದವುಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.<br>• ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಅವಕಾಶ ಕಲ್ಪಿಸುವುದು ಮತ್ತು ಅವರು ವಾಸಿಸುವ ಸ್ಥಳಗಳಲ್ಲಿ ಸ್ವಯಂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.<br>• 'ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾದ್ಯತಾ ಗುಂಪು **(SYJLG)**'ಗಳಿಗೆ ನಿರಂತರ ಮತ್ತು ಸುಸ್ಥಿರ ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುವುದು. |
| 2 | **ಧ್ಯೇಯ** | ಎಸ್‌ವೈಎಸ್ ಯೋಜನೆಯು ಜಂಟಿ ಭಾದ್ಯತಾ ಗುಂಪುಗಳಲ್ಲಿನ ಎಲ್ಲಾ ತಾಂತ್ರಿಕ ಮತ್ತು ಆರ್ಥಿಕವಾಗಿ ಕಾರ್ಯಸಾಧುವಾದ ಯೋಜನೆಗಳಿಗೆ ಅನ್ವಯಿಸುತ್ತದೆ. |

| | | |
|---|---|---|
| | | • ಹಪ್ಪಳ, ಮಸಾಲೆ ಪುಡಿ ಮತ್ತು ಅಗರಬತ್ತಿ ತಯಾರಿಕೆ, ಜವಳಿ ಉಡುಪುಗಳು / ಟೈಲರಿಂಗ್ ಘಟಕಗಳು, ತ್ವರಿತ ಆಹಾರ ಮೃದು ಆಟಿಕೆಗಳ ತಯಾರಿಕೆ, ಸಿಮೆಂಟ್ ಇಟ್ಟಿಗೆಗಳು, ಸೈಕಲ್ ಮತ್ತು ಮೋಟಾರ್ ಸೈಕಲ್, ದುರಸ್ತಿ ಅಂಗಡಿಗಳು, ಔಷಧಾಲಯಗಳು, ಪ್ಲಾಸ್ಟಿಕ್ ಮರುಬಳಕೆ ಘಟಕ, ಹೈಟೆಕ್ ಸ್ಟೋರ್ ಸ್ಥಾಪನೆ ಹಾಗೂ ಆಗ್ರೋ ಫಾರೆಸ್ಟ್ರಿ ಉತ್ತೇಜಿಸುವುದು, ಸೌರಶಕ್ತಿ ಆಧಾರಿತ ಆರ್ಥಿಕ ಚಟುವಟಿಕೆ ಇತ್ಯಾದಿ ಗುಂಪು ಚಟುವಟಿಕೆಗಳಿಗೆ ಅವಕಾಶ.<br><br>• ಮುಂದುವರೆದು, **'ಅನುಬಂಧ-2'** ರಲ್ಲಿರುವ ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವು ನೀಡಲಾಗುವ ಎಲ್ಲಾ ಬ್ಯಾಂಕ್ ಲಿಂಕ್ಡ್ ಯೋಜನೆಗಳಿಗೆ (Bank linked programmes) ಆದ್ಯತೆ ನೀಡಲಾಗುವುದು.<br><br>• ಈ ಯೋಜನೆಯ ಅಡಿಯಲ್ಲಿ ವೈಯಕ್ತಿಕ ಸಾಲಗಳನ್ನು ನೀಡಲಾಗುವುದಿಲ್ಲ.<br><br>• ನೋಡಲ್ ಇಲಾಖೆಗೆ, JLG ಮತ್ತು SYJLG ರಚನೆ, ಕ್ರೆಡಿಟ್ ಲಿಂಕೇಂಜ್, ಆರ್ಥಿಕವಾಗಿ ಕಾರ್ಯಸಾಧುವಾದ ಯೋಜನೆಗಳನ್ನು ಕೈಗೊಳ್ಳಲು ಹಾಗೂ ಬ್ಯಾಂಕ್ ಸಖಿಗಳಿಗೆ ಅವಶ್ಯವಿರುವ ಸಾಮರ್ಥ್ಯ ವೃದ್ಧಿ / ತರಬೇತಿಯನ್ನು ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ಗ್ರಾಮ ಪಂಚಾಯತಿ ಮಟ್ಟದ ಫೆಡರೇಶನ್ (GPLF) ವತಿಯಿಂದ ಒದಗಿಸಲಾಗುವುದು.<br><br>• ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು SYJLG ಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಯೋಜನೆಯ ಪ್ರಸ್ತಾವನೆಗಳನ್ನು ಗುರುತಿಸಿ, ಅವರಿಗೆ ಸೂಕ್ತ ತರಬೇತಿ ಮತ್ತು ಬ್ಯಾಂಕ್‌ಗಳೊಂದಿಗೆ ಕ್ರೆಡಿಟ್ ಲಿಂಕ್ ಮಾಡುವುದು. |
| 03 | **ಅರ್ಹ ಫಲಾನುಭವಿಗಳು** | • ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳ ಸಹಯೋಗದೊಂದಿಗೆ 'ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾದ್ಯತಾ ಗುಂಪು'ಗಳನ್ನು ರಚಿಸಲಾಗುವುದು (ಸದಸ್ಯರು 18 ರಿಂದ 29 ವರ್ಷದ ವಯೋಮಾನದವರು).<br><br>• ನೋಡಲ್ ಇಲಾಖೆಯಿಂದ ರಚನೆಯಾದ ಹೊಸ ಘಟಕಗಳಿಗೆ ಮಾತ್ರ ಯೋಜನೆಯಡಿಯಲ್ಲಿ ನೆರವು ಲಭ್ಯವಿರುತ್ತದೆ. |
| 04 | **ಪ್ರತಿ SYJLGಗೆ ಸೌಲಭ್ಯದ ಸ್ವರೂಪ** | ಸುತ್ತು ನಿಧಿ - ರೂ.10000/- (ಹತ್ತು ಸಾವಿರ ಮಾತ್ರ)<br>Credit linked Subsidy - Rs.100000/- (ಒಂದು ಲಕ್ಷ ಮಾತ್ರ) |

| | | |
|---|---|---|
| 05 | **ಯೋಜನೆಯ ವೆಚ್ಚ / ಸಾಲದ ಪ್ರಮಾಣ** | • ಯೋಜನಾ ವೆಚ್ಚ ರೂ.5.00 ಲಕ್ಷ<br>• ಗರಿಷ್ಠ ಸಾಲದ ಅರ್ಹತಾ ಮೊತ್ತ ರೂ.4.50 ಲಕ್ಷ (ಉತ್ಪಾದನೆ ಮತ್ತು ಸೇವಾ ಘಟಕಗಳಿಗೆ).<br>• ಪ್ರತಿ ಗುಂಪಿಗೆ ಗರಿಷ್ಠ ಸಹಾಯ ಧನ ರೂ.1.00 ಲಕ್ಷ. ಬ್ಯಾಂಕ್‌ಗೆ ಅಗತ್ಯವಿರುವ margin money ಗರಿಷ್ಠ ರೂ.50,000/- ಅನ್ನು ಮುಂಗಡವಾಗಿ ಬಳಸಿಕೊಳ್ಳಬೇಕು ಮತ್ತು ಉಳಿದ ಹಣವನ್ನು credit linked back ended ಸಬ್ಸಿಡಿಯಾಗಿ ಇಡಬೇಕು. |
| 06 | **ಬಡ್ಡಿದರ** | ಬ್ಯಾಂಕಿನ ಮಾರ್ಗಸೂಚಿಯಂತೆ. |
| 07 | **ಸಹಾಯ ಧನ** | ಪ್ರತಿ ಗುಂಪಿಗೆ ಗರಿಷ್ಠ ರೂ.50000/- margin money ಒಳಗೊಂಡಿರುತ್ತದೆ (TFO ನ ಶೇ.10ರವರೆಗೆ). |
| 08 | **ಸುತ್ತು ನಿಧಿ** | 'ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾದ್ಯತಾ ಗುಂಪು'ಗಳನ್ನು ರಚಿಸಿದ ನಂತರ ಸರ್ಕಾರವು ನೀಡುವ ರೂ.10,000/-ಗಳ 'ಸುತ್ತು ನಿಧಿ'ಯನ್ನು SYJLG ಯ ಉಳಿತಾಯ ಖಾತೆಗೆ ಜಮೆಗೊಳಿಸತಕ್ಕದ್ದು ಹಾಗೂ ಈ ಸುತ್ತು ನಿಧಿಯನ್ನು ಯೋಜನೆ ತಯಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ, Credit information ಶುಲ್ಕ, ಸಂಸ್ಕರಣಾ ಶುಲ್ಕ ಇತ್ಯಾದಿಗಳಿಗೆ ಮಾತ್ರ ಬಳಸತಕ್ಕದ್ದು.<br><br>ಸುತ್ತು ನಿಧಿಯ ಅಡಿಯಲ್ಲಿ ಹಣವನ್ನು ಹಿಂತೆಗೆದುಕೊಳ್ಳುವಿಕೆಯ ನಿರ್ಣಯವು ಖಾತೆಯನ್ನು ಹೊಂದಿರುವ ಎಲ್ಲರಿಂದ ಸಹಿ ಮಾಡಲ್ಪಟ್ಟಿರಬೇಕು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಪರಿಶೀಲನೆಗೊಳಪಟ್ಟಿರಬೇಕು. |
| 9 | **ಸದಸ್ಯರ ಸಂಖ್ಯೆ** | 04 ರಿಂದ ಗರಿಷ್ಠ 10.<br><br>ಒಂದು ಕುಟುಂಬದಿಂದ ಒಬ್ಬ ವ್ಯಕ್ತಿ ಮಾತ್ರ ಗುಂಪಿನ ಸದಸ್ಯರಾಗತಕ್ಕದ್ದು. |
| 10 | **ಸಾಲ ಮರುಪಾವತಿ** | ಅವಧಿ ಸಾಲ: ಸಾಲ ಮರುಪಾವತಿ ಅವಧಿ - 6 ತಿಂಗಳವರೆಗೆ ರಜಾ ಅವಧಿ ಸೇರಿ 36 ತಿಂಗಳು. |
| 11 | **ಸುರಕ್ಷತೆ** | • ಬ್ಯಾಂಕಿನ ನೆರವಿನಿಂದ ಸೃಜಿಸಲಾದ ಸ್ವತ್ತುಗಳು.<br>• 'ಕ್ರೆಡಿಟ್ ಗ್ಯಾರಂಟಿ ನಿಧಿ'ಯ ಅಡಿಯಲ್ಲಿ ಸ್ಥಾಪಿಸಲಾಗುವ ಕಿರು ಘಟಕಗಳು ಮಾತ್ರ ಅರ್ಹ ಘಟಕಗಳು (ಸಹಾಯಧನ / ಸಹಾಯಧನ ಘಟಕವನ್ನು ಹೊರತುಪಡಿಸಿ) |
| 12 | **ಸಂಸ್ಕರಣಾ ಶುಲ್ಕ** | ಸುತ್ತುನಿಧಿಯಿಂದ ಭರಿಸತಕ್ಕದ್ದು. |
| 13 | **ಕ್ರೆಡಿಟ್ ಮಾಹಿತಿ ಕಂಪನಿಗಳ (ಸಿಐಸಿ) ವೆಚ್ಚ** | Credit Information Charges (ಸಿಐಸಿ) ವೆಚ್ಚವನ್ನು ಸುತ್ತುನಿಧಿಯಿಂದ ಭರಿಸತಕ್ಕದ್ದು. |

| | | |
|---|---|---|
| 14 | **ಅನುಷ್ಠಾನಗೊಳಿಸುವ ಸಂಸ್ಥೆ / ಏಜೆನ್ಸಿ** | ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (ರಾಷ್ಟ್ರೀಯ ಜೀವನೋಪಾಯ ಮಿಷನ್)<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ನೋಡಲ್ ಇಲಾಖೆಯಾಗಿರಬೇಕು.<br><br>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ Anchor Bank ಆಗಿರಬೇಕು.<br><br>SYJLG ಗಳ ರಚನೆ ಮತ್ತು ಕ್ರೆಡಿಟ್ ಲಿಂಕ್‌ಗಾಗಿ ನಬಾರ್ಡ್ ನಲ್ಲಿ ಲಭ್ಯವಿರುವ ಪ್ರಚಾರದ ಅನುದಾನವನ್ನು ಪಡೆಯಲು ನೋಡಲ್ ಇಲಾಖೆ ಮತ್ತು ಆಂಕರ್ ಬ್ಯಾಂಕ್‌ಗಳು ನಬಾರ್ಡ್ ನೊಂದಿಗೆ ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳುವುದು. |
| 15 | **ನೋಂದಣಿ** | ಪ್ರಥಮ ಹಂತದಲ್ಲಿ, ಪ್ರತಿ ಗ್ರಾಮ ಪಂಚಾಯತಿಗೆ ಒಂದು ಅಥವಾ ಎರಡು SYJLG ಗಳು ರಚನೆ ಮಾಡುವುದು.<br>ತರುವಾಯ, ಪ್ರತಿ ಗ್ರಾಮಕ್ಕೆ ಕನಿಷ್ಠ ಒಂದು SYJLG ಅನ್ನು ರಚಿಸುವುದು ಮತ್ತು ಕ್ರೆಡಿಟ್ ಲಿಂಕ್ ಮಾಡುವುದು.<br>ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಗುಂಪಿನ ಸದಸ್ಯರು / ಯುವಕರನ್ನು ಗುರುತಿಸುವುದು.<br>ಸದಸ್ಯರ ಗುರುತಿಸುವಿಕೆಯ ನಂತರ ಜಂಟಿ ನಿರ್ಣಯಕ್ಕೆ ಎಲ್ಲಾ ಗುರುತಿಸಲ್ಪಟ್ಟ ಸದಸ್ಯರು ಹಾಗೂ ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸಹಿ ಮಾಡುವುದು.<br>ಉಪ ನಿರ್ದೇಶಕರು (ನೋಂದಣಿ) ಇವರು ನಿಶ್ಶುಲ್ಕವಾಗಿ ಗುಂಪನ್ನು ನೋಂದಣಿ ಮಾಡಿ ನೋಂದಣಿ ಪ್ರಮಾಣ ಪತ್ರವನ್ನು ನೋಡಲ್ ಇಲಾಖೆಗೆ ಹಸ್ತಾಂತರಿಸುವುದು. |
| 16 | **ಮೇಲ್ವಿಚಾರಣೆ ಕಾರ್ಯವಿಧಾನ** | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ವ್ಯಾಪಾರ ವ್ಯವಹಾರ ಸಖಿಗಳು (Business Correspondence Sakhies) / ಬ್ಯಾಂಕಿನ ಕಾರ್ಪೊರೇಟ್ ನ BCs SYJLG ಯ ರಚನೆಯ ಪ್ರಗತಿಯ ಕುರಿತು ಹಾಗೂ ನೋಡಲ್ ಇಲಾಖೆಗೆ ಜಿಲ್ಲಾ ಮಟ್ಟದ ಏಕೀಕೃತ ಪ್ರಗತಿಯನ್ನು ವರದಿ ಮಾಡುವ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಖಾತೆ ತೆರೆಯುವ ಕುರಿತು ಮೇಲ್ವಿಚಾರಣೆ ಮಾಡುವುದು.<br><br>ನೋಡಲ್ ಇಲಾಖೆಗೆ ಪ್ರಗತಿ ವರದಿಯನ್ನು ಸಲ್ಲಿಸುವ ಎಸ್‌ಎಲ್‌ಬಿಸಿಗೆ ಡಿಸಿಸಿಯು ಸುತ್ತು ನಿಧಿಯ ಸ್ವೀಕೃತಿಯ ಪ್ರಗತಿ, ಸಬ್ಸಿಡಿ ಮತ್ತು ಸಾಲದ ಮಂಜೂರಾತಿ / ವಿತರಣೆ ಕುರಿತು ಮೇಲ್ವಿಚಾರಣೆ ಮಾಡಿ, ಮಾಹೆಯಾನ ಪ್ರಗತಿ ವರದಿಯನ್ನು ಸಲ್ಲಿಸುವುದು. |

| | | |
|---|---|---|
| 17 | **ಘಟಕಗಳ ಭೌತಿಕ ಪರಿಶೀಲನೆ** | ಘಟಕಗಳ ಭೌತಿಕ ಪರಿಶೀಲನೆಯನ್ನು ಬ್ಯಾಂಕರ್‌ಗಳು, ಬ್ಯಾಂಕ್ ಸಖಿಗಳು, ಕಾರ್ಪೊರೇಟ್ BC ಗಳು ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮಾಡಲಾಗುವುದು. |
| 18 | **ಇತರೆ ಷರತ್ತುಗಳು** | • ಯೋಜನಾ ಪ್ರಸ್ತಾವನೆಗಳ ತಾಂತ್ರಿಕ ಕಾರ್ಯಸಾಧ್ಯತೆ ಮತ್ತು ಆರ್ಥಿಕ ಕಾರ್ಯಸಾಧ್ಯತೆಯ ಆಧಾರದ ಮೇಲೆ ಸಾಲದ ನಿರ್ಧಾರವು ಬ್ಯಾಂಕಿನ ಮೇಲೆ ನಿಂತಿರುತ್ತವೆ. ಪ್ರಸ್ತಾವನೆಯನ್ನು ಸ್ವೀಕರಿಸಿದ 15-30 ದಿನಗಳೊಳಗೆ ಎಲ್ಲಾ ಅರ್ಹ ಪ್ರಸ್ತಾವನೆಗಳಿಗೆ ಬ್ಯಾಂಕ್ ಸಾಲ ಮಂಜೂರಾತಿ ಮತ್ತು ವಿತರಣೆಯನ್ನು ತಪ್ಪದೇ ಮಾಡತಕ್ಕದ್ದು.<br>• ಸಬ್ಸಿಡಿಯನ್ನು ಗರಿಷ್ಠ ರೂ.5.00 ಲಕ್ಷಗಳನ್ನು ಒಂದು ವಾರದೊಳಗಾಗಿ ಸಾಲದ ಮೊದಲ ಕಂತಾಗಿ ವಿತರಣೆ ಮಾಡುವ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ನೀಡಲಾಗುವುದು.<br>• ರಾಜ್ಯ ಸರ್ಕಾರದಿಂದ ಪಡೆದ ಸಬ್ಸಿಡಿಯಿಂದ ಗರಿಷ್ಠ ರೂ.50,000/- ವರೆಗಿನ Margin money ಯನ್ನು ಮುಂಗಡವಾಗಿ ಬಳಸಿಕೊಳ್ಳಬೇಕು. ರೂ.50,000/- ಮೀರಿದ Margin money ಸಬ್ಸಿಡಿಯಿಂದ ಲಭ್ಯವಿರುವುದಿಲ್ಲ.<br>• ಗುಂಪಿನ ಗುರುತಿಸುವಿಕೆಯನ್ನು ಸ್ಥಾಪಿಸಲು ನೋಡಲ್ ಇಲಾಖೆಯು ಬ್ಯಾಂಕುಗಳಿಗೆ ದಾಖಲೆಗಳನ್ನು ಒದಗಿಸತಕ್ಕದ್ದು.<br>• 'ಸ್ವಾಮಿ ವಿವೇಕಾನಂದ ಯುವಕರ ಜಂಟಿ ಭಾದ್ಯತಾ ಗುಂಪಿನಿಂದ ಒಬ್ಬರು ಅಥವಾ ಇಬ್ಬರು ಸದಸ್ಯರು ಬಿಟ್ಟುಹೋಗಿದ್ದಲ್ಲಿ, ಸಾಲದ ಮೊತ್ತವು ಅಂತ್ಯಗೊಳ್ಳುವವರೆಗೂ ಸಂಘ ಅಸ್ತಿತ್ವದಲ್ಲಿರುತ್ತದೆ.<br>• ಗುಂಪಿನ ಎಲ್ಲಾ ಸದಸ್ಯರು ಸಾಲ ಮರುಪಾವತಿಗೆ ಸಮಾನ ಹೊಣೆಗಾರರಾಗಿರುತ್ತಾರೆ.<br>• ಗುಂಪಿನ ಸದಸ್ಯರ ಖಾತೆಯು Aadhaar ಮತ್ತು mobile seeded ಆಗಿರಬೇಕು. |

Swetna 10/1/23